ಅ) ಈ ಕಾಯಿಲೆಗೆ ಚಿಕಿತ್ಸೆ ಪಡೆದರೂ ಮೃತ ಪಟ್ಟವರ ಸಂಖ್ಯೆ ಒಟ್ಟು ೫ ಜನರು.

ತೀರ್ಥಹಳ್ಳಿ ತಾಲ್ಲೂಕು — ೪

ಶಿವಮೊಗ್ಗ ತಾಲ್ಲೂಕು — ೧

ಇ) ಇಲ್ಲ.

ಜನನಿಯಂತ್ರಣ ಷಿನೆಯಂ ಹಂತದ ಯೋಜನೆಯ ಬಗ್ಗೆ.

೫೧೨. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾರತೀಯ ಜನ ನಿಯಂತ್ರಣ ಷಿನೇ ಹಂತದ ಯೋಜನೆಯು ಯಾವ ಹಂತದಲ್ಲಿದೆ.

ಆ) ಇದಕ್ಕೆ ಕೇಂದ್ರ ಸರ್ಕಾರದಿಂದ ಬರುವ ಹಣ ಈ ವರ್ಷ ಸರಿಯಾಗಿ ಬಂದಿದೆಯೇ ?

ಇ) ಬರದಿದ್ದಲ್ಲಿ ಕಾರಣಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

ಅ) ಮುಕ್ತಾಯದ ಹಂತದಲ್ಲಿದೆ.

ಆ) ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ೧೯೯೦–೯೧ನೇ ಸಾಲಿಗೆ ರೂ. ೮ ಕೋಟಿಯನ್ನು ಹಂಚಿಕೆ ಮಾಡಿರುತ್ತಾರೆ.

ಇ) ಮೊದಲನೆಯ ಕಂತು ಈ ತಿಂಗಳಲ್ಲಿ (ಜೂನ್) ಬರುವ ನಿರೀಕ್ಷೆ ಇದೆ.

ಹೈಪವರ್ ಕಮಿಟಿಯ ಬಗ್ಗೆ

೫೧೩. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆರೋಗ್ಯ ಇಲಾಖೆಯಲ್ಲಿ ಔಷಧಿಗಳನ್ನು ಕೊಳ್ಳಲು ಶಿಫಾರಸ್ಸು ಮಾಡಬೇಕಾದ ಹೈಪವರ್ ಕಮಿಟಿ ರಚನೆ ಆಗಿದೆಯೇ ?

ಆ) ಹಾಗಿದ್ದರೆ, ಯಾವಾಗ ರಚಿಸಲಾಯಿತು ಹಾಗೂ ಯಾವ ಆಧಾರದ ಮೇಲೆ ಈ ಸಮಿತಿಗೆ ಪರಿಣಿತರನ್ನು ನೇಮಿಸಲಾಗಿದೆ?

ಶ್ರೀಮತಿ ಮನೋರಮ ಮಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಆಗಿದೆ

ಆ) ದಿನಾಂಕ ೫–೫–೧೯೯೦ರಂದು ರಚಿಸಲಾಯಿತು. ಈ ಸಮಿತಿಯು ಸರ್ಕಾರದ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ನಿರ್ದೇಶಕರು, ವೈದ್ಯಕೀಯ ಶಿಕ್ಷಣದ ನಿರ್ದೇಶಕರು ಮತ್ತು ಔಷಧ ನಿಯಂತ್ರಕರನ್ನು ಒಳಗೊಂಡಿರುತ್ತದೆ.

ಔಷಧಿಗಳು ಮತ್ತು ಉಪಕರಣಗಳನ್ನು ಆಯ್ಕೆ ಮಾಡಲು ಸರ್ಕಾರವು ಬೇರೆ ಒಂದು ತಜ್ಞರ ಸಮಿತಿಯನ್ನು ರಚಿಸಿರುವುದರಿಂದ, ಈ ಸಮಿತಿಗೆ ಪರಿಣಿತರನ್ನು ನೇಮಿಸುವ ಅವಶ್ಯಕತೆ ಇಲ್ಲ.

ಪಶುಸಂಗೋಪನಾ ಆಸ್ಪತ್ರೆಗಳ ಬಗ್ಗೆ

೫೪೦. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈ ವರ್ಷದಲ್ಲಿ ಹೊಸದಾಗಿ ಎಷ್ಟು ಪಶುಸಂಗೋಪನಾ ಆಸ್ಪತ್ರೆಗಳನ್ನು ಮಂಜೂರು ಮಾಡಲು ಸರ್ಕಾರ ಯೋಜಿಸಿದೆ ?

ಆ) ಯಾವಾಗ ಈ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗುತ್ತದೆ ?

ಇ) ಈಗ ಹಾಲಿ ಇರುವ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಮಂತ್ರಿಗಳು).—

ಅ) ೧೯ ಗ್ರಾಮೀಣ ಪಶುವೈದ್ಯ ಶಾಲೆ ತೆರೆಯುವ ಹಾಗೂ ೬೧ ಗ್ರಾಮೀಣ ಪಶುವೈದ್ಯ ಶಾಲೆಯನ್ನು ಪಶುವೈದ್ಯ ಶಾಲೆಯಾಗಿ ಉನ್ನತೀಕರಿಸಲು ಯೋಜಿಸಲಾಗಿದೆ.

ಆ) ಜಿಲ್ಲೆಗಳಲ್ಲಿ ಸೂಕ್ತ ಸ್ಥಳ ಆಯ್ಕೆ ಆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಹೌದು

ಈ) ಇದರ ಸಲುವಾಗಿ ೨೫೦ ಲಕ್ಷ ರೂ.ಗಳನ್ನು ಯೋಜನೇತರ ಶೀರ್ಷಿಕೆಯಲ್ಲಿ ಔಷಧಿ ಸರಬರಾಜಿಗಾಗಿ ಕಾದಿರಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿನ ಸರ್ಕಾರಿ ಆಸ್ಪತ್ರೆಗಳ ಬಗ್ಗೆ

೫೧೫. ಶ್ರೀ ಆರ್. ವಿ. ದೇಶಪಾಂಡೆ (ಹಲಿಯಾಳ್).—ಮಾನ್ಯ ಆರೋಗ್ಯ ಮಂತ್ರಿ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿ ಎಷ್ಟು ಹುದ್ದೆಗಳು ಖಾಲಿ ಇವೆ ?

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇದೆ :

ವೈದ್ಯರುಗಳು—೨೫

ಇತರೆ ಸಿಬ್ಬಂದಿ—೧೭೨

ಆ) ಸರ್ಕಾರದ ಆರ್ಥಿಕ ಮಿತವ್ಯಯದ ಆದೇಶ ಸಡಿಲಗೊಂಡ ನಂತರ ಈ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಬೆಂಗಳೂರಿನ ವಿಕ್ಟೋರಿಯಾ ಮತ್ತು ವಾಣಿವಿಲಾಸ ಆಸ್ಪತ್ರೆಗಳ ಅಭಿವೃದ್ಧಿ ಬಗ್ಗೆ

೫೫. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೯–೯೦ರಲ್ಲಿ ವಿಕ್ಟೋರಿಯಾ ಮತ್ತು ವಾಣಿವಿಲಾಸ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಒದಗಿಸಲಾದ ಹಣದ ಮೊತ್ತವೆಷ್ಟು ?

ಆ) ಸದರಿ ಅಭಿವೃದ್ಧಿ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ ಹಾಗೂ ಇದುವರೆವಿಗೂ ಖರ್ಚಾದ ಹಣವೆಷ್ಟು ?

ಇ) ಈ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳಲು ಇನ್ನೂ ಎಷ್ಟು ಅವಧಿ ಬೇಕಾಗುವುದು? ಹೀಗೆ ತಡವಾಗಲು ಕಾರಣವೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೫೨.೦೦ ಲಕ್ಷ ರೂಪಾಯಿಗಳು

ಆ) ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹಾಸು ಕೆಲಸ ಪ್ರಗತಿಯಲ್ಲಿದೆ. ನೆಲಮಹಡಿ ಮತ್ತು ಮೊದಲನೇ ಮಹಡಿ ಕೆಲಸ ಮುಗಿದು ಸಂಬಂಧಪಟ್ಟ ಅಧಿಕಾರಿಗಳಿಗೆ ಪಹಿಸಿಕೊಡಲಾಗಿದೆ. ೨ನೇ ಮಹಡಿ ಕೆಲಸ ಪ್ರಗತಿ ಪಥದಲ್ಲಿದೆ. ವಾಣಿವಿಲಾಸ ಆಸ್ಪತ್ರೆಯಲ್ಲಿಯೂ ಕೆಲಸ ಪ್ರಗತಿ ಪಥದಲ್ಲಿದೆ. ಈವರೆಗೆ ಳಳಿ.೩೮ ಲಕ್ಷ ರೂಪಾಯಿಗಳು ಖರ್ಚಾಗಿವೆ.

ಇ) ಹಣದ ಅಡಚಣೆಯಿಂದಾಗಿ ತಡವಾಗಿದ್ದು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.